ಸರ್ಕಾರದ ಪ್ರಧಾನ ಕಾರ್ಯದರ್ಶಿರವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ **ದಿನಾಂಕ:14.08.2019** ರಂದು ನಡೆದ MPIC ಸಭಾ ನಡವಳಿಗಳು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಂಚಾಯತ್ ರಾಜ್ ಇಲಾಖೆರವರು ಎಲ್ಲಾ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಬಂಧಿಸಿದ ಕಾರ್ಯಕ್ರಮಗಳ ಆಯುಕ್ತರು ಮತ್ತು ನಿರ್ದೇಶಕರುಗಳೊಂದಿಗೆ ಪ್ರಗತಿ ಪರಿಶೀಲನೆ ಮತ್ತು ಸಮಾಲೋಚನೆ ಮಾಡಿದ ನಂತರ ಅನುಪಾಲನೆಗಾಗಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

1. **ಕುಡಿಯುವ ನೀರಿನ ಯೋಜನೆಗಳಿಗೆ** ಸಂಬಂಧಿಸಿದಂತೆ, ಆಯವ್ಯಯದನ್ವಯ ಲಭ್ಯವಿರುವ ಒಟ್ಟಾರೆ ಅನುದಾನಕ್ಕೆ ಶೇ.11 ಮಾತ್ರ ಆರ್ಥಿಕ ಪ್ರಗತಿಯಾಗಿರುವುದರಿಂದ ಪ್ರಗತಿ ತೀವ್ರಗೊಳಿಸಬೇಕು.
2. RWS-SDP ಯೋಜನೆಯಡಿಯಲ್ಲಿಯೂ ಸಹ ಪ್ರಗತಿ ಶೇ.2 ಮಾತ್ರವಾಗಿರುವುದರಿಂದ ಜಾಗ್ರತೆಯಾಗಿ ಪ್ರಗತಿ ತೀವ್ರಗೊಳಿಸಬೇಕು.
3. ಭೌತಿಕ ಸಾಧನೆ ಹಾಗೂ ಆರ್ಥಿಕ ಸಾಧನೆಗೆ ಪೂರಕವಾಗಿರಬೇಕು. ಮನೆಗಳಿಗೆ ನಳ ನೀರು ಸಂಪರ್ಕ ಕಲ್ಪಿಸಿರುವ ಕುರಿತು ವಿವರಗಳನ್ನು Capital & Revenue (ರಾಜ್ಯ ಮತ್ತು ಕೇಂದ್ರವಲಯ ಸೇರಿದಂತೆ ) ಕಡ್ಡಾಯವಾಗಿ ಒಂದೇ ಕಡೆ ದಾಖಲಿಸಬೇಕು.
4. DSSನಲ್ಲಿ ವಾಸ್ತವವಾಗಿ ಆಗಿರುವ ವೆಚ್ಚ ದಾಖಲಾಗಿಲ್ಲದಿರುವುದರಿಂದ ಸದರಿ ವೆಚ್ಚ ಸರಿಯಾಗಿ ನಮೂದಿಸಬೇಕು.
5. **ಸ್ವಚ್ಛ ಭಾರತ ಅಭಿಯಾನ** ಯೋಜನೆಯಡಿ ಪ್ರಗತಿ ತೀವ್ರಗೊಳಿಸಬೇಕು.

**(ಕ್ರಮ: ಆಯುಕ್ತರು, ಕಗ್ರಾಕುನೀಸ ನೈರ್ಮಲ್ಯ ಇಲಾಖೆ, CE,RDWSD, SBM)**

6. **PMGSY ರಸ್ತೆಗಳ ಕಾರ್ಯಕ್ರಮದಡಿ** ರಾಜ್ಯದ ಪ್ರಸ್ತಾಪವನ್ನು ಕೇಂದ್ರ ಸರ್ಕಾರದೊಡನೆ 2019-20ರ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಹಿಂಬಾಲಿಸಬೇಕು.
7. **NGNR ಯೋಜನೆಯಡಿ ರಸ್ತೆಗಳ ಆಯ್ಕೆ** ಹಾಗೂ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದುಕೊಳ್ಳಲು ಜಾಗ್ರತೆ ಕ್ರಮ ವಹಿಸಬೇಕು.
8. **ಸುವರ್ಣ ಗ್ರಾಮೋದಯ** ಯೋಜನೆಯಡಿ ಭೌತಿಕ ಪ್ರಗತಿ ದಾಖಲಿಸಿಲ್ಲ, ಅದನ್ನು ಕಡ್ಡಾಯವಾಗಿ ದಾಖಲಿಸಬೇಕು.
9. **ಕೆರೆಗಳಿಗೆ ಸಂಬಂಧಿಸಿದಂತೆ** ಪ್ರಗತಿ ತೀವ್ರಗೊಳಿಸಬೇಕು.
10. Road Safety 3054 ರಡಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಒಂದು ತಿಂಗಳೊಳಗಾಗಿ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಬೇಕು.

**(ಕ್ರಮ: ನಿರ್ದೇಶಕರು, ಸುವರ್ಣ ಗ್ರಾಮೋದಯ/COO/CAO KRRDA,CE,PRED)**

11. **'ಜಲಾಮೃತ'** ಯೋಜನೆಯಡಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಕಡ್ಡಾಯವಾಗಿ ನಮೂದಿಸಬೇಕು.

**(ಕ್ರಮ: ನಿರ್ದೇಶಕರು, RI (1) / ನಿರ್ದೇಶಕರು, ಜಲಾಮೃತ)**

12. e-gov ನಡಿ ಜಿಲ್ಲಾವಾರು ಆಯ್ದ ಗ್ರಾಮ ಪಂಚಾಯಿತಿಗಳ Computerisation ಸಂಬಂಧ Tender document ನೀಡಿದ್ದು, ಅದನ್ನು ಹಿಂಬಾಲಿಸಿ ಉದ್ದೇಶಿತ ಗಣಕೀಕರಣ/ Digitization ವ್ಯವಸ್ಥೆ ಸಫಲವಾಗುವಂತೆ ಹಿಂಬಾಲಿಸುವುದು. ಪ್ರಸಕ್ತ

ಸಾಲಿಗೆ ಲಭ್ಯವಾಗಿರುವ ರೂ.21 ಕೋಟಿ ಸಂಪೂರ್ಣವಾಗಿ ಮತ್ತು ಸಮರ್ಪಕವಾಗಿ ವಿನಿಯೋಗವಾಗಬೇಕು.

**(ಕ್ರಮ: ನಿರ್ದೇಶಕರು,ಇ-ಆಡಳಿತ)**

13. **ANSSIRD, ಮೈಸೂರು** ಚಟುವಟಿಕೆಗಳ ಕಟ್ಟಡ ನಿರ್ಮಾಣ ಬಾಬ್ತಿಗೆ ಹಾಗೂ ಪ್ರಾಂತೀಯ ತರಬೇತಿಗಳಿಗೆ, ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಿರೂಪಣೆ ನೀಡಬೇಕು.

**(ಕ್ರಮ: ನಿರ್ದೇಶಕರು,ANSSID/ ನಿರ್ದೇಶಕರು, PR-II)**

14. **RDPR University ಚಟುವಟಿಕೆಗಳ** ವಸ್ತುಸ್ಥಿತಿ ಹಾಗೂ ಕಟ್ಟಡ ನಿರ್ಮಾಣ ಸಂಬಂಧ ಬಿಡುಗಡೆಯಾಗಿರುವ ಅನುದಾನದ ಅಗತ್ಯತೆ ಮತ್ತು ವಾಸ್ತವಿಕ ಚಿತ್ರಣದ ನಿರೂಪಣೆ ನೀಡಬೇಕು.
15. ಮಹಿಳಾ ವಸತಿ ನಿಲಯ ಹಾಗೂ ಆಡಳಿತ ಬ್ಲಾಕ್ ಕಟ್ಟಡಗಳ ಸಂಬಂಧ ಪ್ರತ್ಯೇಕವಾಗಿ ನಿರೂಪಣೆ ನೀಡಿ ಚರ್ಚಿಸಬೇಕು.
16. **Untied grants, GP grants, TP grants ಹಾಗೂ ZP grants** ಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ಅಗತ್ಯ ಅನುದಾನ ಒದಗಿಸಿದ್ದರು ಕಾಲಕಾಲಿಕ ಅನುದಾನ ಬಿಡುಗಡೆ ಹಾಗೂ ಪ್ರಗತಿಯಾಗಿಲ್ಲ. ಅನುದಾನ ಬಿಡುಗಡೆ ಮಾಡಿದ ತಕ್ಷಣ Online ನಲ್ಲಿ ಮಾಹಿತಿ ಇಂಧೀಕರಿಸಿ DSS ನಲ್ಲಿ ವೆಚ್ಚ ನಮೂದಿಸಬೇಕು.
17. **KPR grants ವಿನಿಯೋಗ** ಸಲುವಾಗಿ ವಸ್ತುಸ್ಥಿತಿ ನಿರೂಪಣೆಯನ್ನು ವಿವರಗಳೊಂದಿಗೆ ಮಾಡಬೇಕು.

**(ಕ್ರಮ: ನಿರ್ದೇಶಕರು,PR-I & PR-II)**

18. **WGDP, SEP ಮತ್ತು DRDA ಲೆಕ್ಕ ಶೀರ್ಷಿಕೆಗಳಡಿ** ಆಗಿರುವ ವೆಚ್ಚವನ್ನು DSS ನಡಿ ಕಡ್ಡಾಯವಾಗಿ ದಾಖಲಿಸಬೇಕು.

**(ಕ್ರಮ: ನಿರ್ದೇಶಕರು,ಗ್ರಾಮೂಸೌ-II)**

19. ಆಯಾ ಕಾರ್ಯಕ್ರಮಗಳ ಆಯುಕ್ತರುಗಳು/ ನಿರ್ದೇಶಕರುಗಳು/ ಖಜಾನೆ ಮೂಲಕ ಭರಿಸಿರುವ ವೆಚ್ಚದ ಬಾಬ್ತು, **DSS ವೆಚ್ಚದ** ಅಂಕಿಅಂಶಗಳಿಗೆ ತಾಳೆಯಾಗಿರುವುದನ್ನು ಪ್ರತಿ ಮಾಹೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ವಿಶೇಷವಾಗಿ ಗ್ರಾನೀಸ maintenance grants ಮತ್ತು ಇತರೆ ವೈದ್ಯಕೀಯ ವೆಚ್ಚದ ಲೆಕ್ಕ ಶೀರ್ಷಿಕೆ ಇತ್ಯಾದಿಗಳ ವೆಚ್ಚಗಳು DSS ನಲ್ಲಿ ದಾಖಲಾಗುವಂತೆ ZP-CAO/CPO/DS ಗಳು ಗಮನ ಹರಿಸಬೇಕು ಎಂದು ಸೂಚನೆ ನೀಡುವುದು.
20. ಎಲ್ಲಾ ಗ್ರಾಅಪಂ.ರಾಜ್ ಇಲಾಖೆಯ ಮುಖ್ಯಸ್ಥರುಗಳು **ಕಡತ ವಿಲೇವಾರಿ ಮತ್ತು ಸ್ವೀಕೃತಿಗಳ ವಿಲೇವಾರಿ ಗರಿಷ್ಠ ಮಟ್ಟದಲ್ಲಿ ಆಗುವಂತೆ ನೋಡಿಕೊಳ್ಳತಕ್ಕದ್ದು. KDP ಸಭೆಯಲ್ಲಿ** ಈ ಕುರಿತು ವಿಶೇಷವಾಗಿ ಪರಿಶೀಲನೆಯಾಗುವುದರಿಂದ ಮತ್ತು ಗ್ರಾಅಪಂ.ರಾಜ್ ಇಲಾಖೆಯ ಕಡತ / ಸ್ವೀಕೃತಿ ವಿಲೇವಾರಿ ಶ್ರೇಣಿ ಇತರೆ ಇಲಾಖೆಗಳಿಗಿಂತ ಕೆಳ ಮಟ್ಟದಲ್ಲಿರುವುದರಿಂದ **ತಕ್ಷಣ LMS/ FMS ಮತ್ತು e-office ಗಳಲ್ಲಿ ಮಾಹಿತಿ ಇಂಧೀಕರಿಸಿ ಗ್ರಾಅಪಂ.ರಾಜ್ ಇಲಾಖೆಯ** ಕಡತ ವಿಲೇವಾರಿ, ಸಕಾಲ ಸೇವೆಗಳು, ಜನ ಸ್ಪಂದನ ಹಾಗೂ ಇ-ಸಮೀಕ್ಷೆ ಇವುಗಳಿಗೆ ಸಂಬಂಧಿಸಿದಂತೆ ವಿಲೇವಾರಿಗೆ ವಿಶೇಷ ಗಮನ ವಹಿಸಬೇಕು. ವಿಲೇವಾರಿಯಾದ ಮಾಹಿತಿಯನ್ನು ನ್ಯಾಯಾಲಯದ ಪ್ರಕರಣಗಳೂ ಸೇರಿದಂತೆ ಆಯಾಯ

ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂಧೀಕರಿಸಬೇಕು.ಇದರಲ್ಲಿ ಯಾವುದೇ ಉದಾಸೀನತೆ ಸಲ್ಲದು.

**(ಕ್ರಮ: ಸಂಬಂಧಪಟ್ಟ ಎಲ್ಲಾ ಆಯುಕ್ತರು/ ನಿರ್ದೇಶಕರುಗಳು)**

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ನಡವಳಿ ತಲುಪಿದ ಒಂದು ವಾರದೊಳಗೆ ಪಿ.ಎಂ.ಐ ವಿಭಾಗಕ್ಕೆ ನೀಡಲು ಸೂಚಿಸಿ ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಂ.ರಾಜ್

ಸಂಖ್ಯೆ:ಗ್ರಾಅಪ/37/ಯೋಉಮಾ/2019 ದಿನಾಂಕ:30.08.2019

ಇವರಿಗೆ:

1. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಬೆಂಗಳೂರು.
2. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ, ಕಾವೇರಿಭವನ, ಬೆಂಗಳೂರು-09.
3. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್. ಖನಿಜಭವನ ಬೆಂಗಳೂರು.
4. ಉಪಕಾರ್ಯದರ್ಶಿಗಳು, ಆಡಳಿತ- I & II.
5. ನಿರ್ದೇಶಕರು, ಜಲಾಮೃತ.
6. ನಿರ್ದೇಶಕರು ಪಂಚಾಯತ್ ರಾಜ್ -1/ ಪಂಚಾಯತ್ ರಾಜ್ -2 / ಸ್ವ.ಉ.ಕಾ / ಗ್ರಾಮ ವಿಕಾಸ /PMI / ಇ-ಆಡಳಿತ/ ಆಂತರಿಕ ಆರ್ಥಿಕ ಸಲಹೆಗಾರರು / ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು & ನೈರ್ಮಲ್ಯ ಇಲಾಖೆ.
8. ಮುಖ್ಯ ಇಂಜಿನಿಯರ್, ಪಂ. ರಾಜ್ ಇಂ.ಇಲಾಖೆ. ಬೆಂಗಳೂರು.
9. ಮುಖ್ಯ ಕಾರ್ಯಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
12. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
13. ವಿಶೇಷಾಧಿಕಾರಿ (ಜಿ.ಪಂ), ಆರ್ಥಿಕ ಇಲಾಖೆ, ಕೊಠಡಿ ಸಂಖ್ಯೆ 249 (ಬಿ), ವಿಧಾನಸೌಧ.
14. ನಿರ್ದೇಶಕರು,ಜಿಲ್ಲಾ ಯೋಜನಾ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
15. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
16. ನಿರ್ದೇಶಕರು, ಇ-ಆಡಳಿತ ಕೇಂದ್ರ ಸಭಾ ನಡವಳಿಯನ್ನು ವೆಬ್ ಸೈಟ್ ನಲ್ಲಿ ಅಪ್ಲೋಡ್ ಮಾಡಲು ಕೋರಿದೆ.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್/ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.